ಕರ್ನಾಟಕ ಸರ್ಕಾರ

# ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ

(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)

Government of Karnataka

# Karnataka Residential Educational Institutions Society

(An Organisation of Govt. of Karnataka)

ಸಂಖ್ಯೆ: ಕವಶಿಸಸ/ಆಡಳಿತ/ಜೇಷ್ಠತೆ/ಸಿಆರ್–/2021–2022 ದಿನಾಂಕ: 21.11.2022

## ಅಧಿಕೃತ ಜ್ಞಾಪನ

ವಿಷಯ: ದಿನಾಂಕ: 01.01.2022 ಕ್ಕೆ ಇದ್ದಂತೆ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಶಿಕ್ಷಕರ ವಿಷಯವಾರು ತಾತ್ಕಾಲಿಕ ಪದಕ್ರಮ ಪಟ್ಟಿಯನ್ನು ಹೊರಡಿಸುವ ಬಗ್ಗೆ.

********

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿನ ವಸತಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಖಾಯಂ ಅಧಿಕಾರಿ/ನೌಕರರ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ದಿನಾಂಕ: 01.01.2022 ಕ್ಕೆ ಇದ್ದಂತೆ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವಸತಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಕೆಳಕಂಡ ವಿಷಯ ಶಿಕ್ಷಕರ ವೃಂದದ ರಾಜ್ಯ ಮಟ್ಟದ ತಾತ್ಕಾಲಿಕ ಪದಕ್ರಮ ಪಟ್ಟಿಯನ್ನು ಅನುಬಂಧ–1 ರಲ್ಲಿ, ಉಳಿಕೆ ಮೂಲ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು, ಅನುಬಂಧ–2 ರಲ್ಲಿ ಹಾಗೂ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಅನುಬಂಧ–3 ರಲ್ಲಿ, ಈ ಅಧಿಕೃತ ಜ್ಞಾಪನದೊಂದಿಗೆ ತಾತ್ಕಾಲಿಕ ಜೇಷ್ಠತಾ ಪಟ್ಟಿಗಳನ್ನು ಸಂಘದ ಅಧಿಕೃತ ವೈಬ್‌ಸೈಟ್ (www.kreis.kar.nic.in) ನಲ್ಲಿ ಪ್ರಕಟಿಸಲಾಗಿದೆ.

| ಕ್ರ ಸಂ. | ವೃಂದ | ಅನುಬಂಧಗಳು |
|---|---|---|
| 1 | ಕನ್ನಡ ಶಿಕ್ಷಕರು | ಅನುಬಂಧ–1, 2 ಮತ್ತು 3 |
| 2 | ಇಂಗ್ಲೀಷ ಶಿಕ್ಷಕರು | ಅನುಬಂಧ–1, 2 ಮತ್ತು 3 |
| 3 | ಹಿಂದಿ ಶಿಕ್ಷಕರು | ಅನುಬಂಧ–1, 2 ಮತ್ತು 3 |
| 4 | ಗಣಿತ ಶಿಕ್ಷಕರು | ಅನುಬಂಧ–1, 2 ಮತ್ತು 3 |
| 5 | ವಿಜ್ಞಾನ ಶಿಕ್ಷಕರು | ಅನುಬಂಧ–1, 2 ಮತ್ತು 3 |
| 6 | ಸಮಾಜ ವಿಜ್ಞಾನ ಶಿಕ್ಷಕರು | ಅನುಬಂಧ–1, 2 ಮತ್ತು 3 |
| 7 | ಕಂಪ್ಯೂಟರ ಶಿಕ್ಷಕರು | ಅನುಬಂಧ–1, 2 ಮತ್ತು 3 |
| 8 | ದೈಹಿಕ ಶಿಕ್ಷಣ ಶಿಕ್ಷಕರು | ಅನುಬಂಧ–1, 2 ಮತ್ತು 3 |
| 9 | ಸಂಗೀತ ಶಿಕ್ಷಕರು | ಅನುಬಂಧ–1, 2 ಮತ್ತು 3 |

ವಸತಿ ಶಾಲೆಗಳ ಎಲ್ಲಾ ಶಿಕ್ಷಕರು ಸಂಘದ ಅಧಿಕೃತ ವೆಬ್‌ಸೈಟ್‌ನಿಂದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಡೌನ್‌ಲೋಡ್ ಮಾಡಿಕೊಳ್ಳುವುದು. ತಾತ್ಕಾಲಿಕ ಜೇಷ್ಠತಾ ಪಟ್ಟಿಯ ಬಗ್ಗೆ ಆಕ್ಷೇಪಣೆಗಳು/ನ್ಯೂನ್ಯತೆಗಳು (ತಮ್ಮ ಹೆಸರು, ಪದನಾಮ, ಜಾತಿ, ಜನ್ಮ ದಿನಾಂಕ, ಕರ್ತವ್ಯಕ್ಕೆ ವರದಿ ಮಾಡಿಕೊಂಡ ದಿನಾಂಕ, ಖಾಯಂ ಪೂರ್ವಾವಧಿ ಘೋಷಣೆ ದಿನಾಂಕ, ಇತ್ಯಾದಿಗಳಲ್ಲಿ) ಏನಾದರೂ ಇದ್ದಲ್ಲಿ ಮುಂದಿನ 15 ದಿನಗಳೊಳಗಾಗಿ ಸೂಕ್ತ ದಾಖಲೆಗಳೊಂದಿಗೆ ತಮ್ಮ ಪ್ರಾಂಶುಪಾಲರ ಮುಖಾಂತರ ಆಕ್ಷೇಪಣೆಗಳನ್ನು ಸಲ್ಲಿಸುವುದು. ವಸತಿ ಶಾಲೆಗಳ ಪ್ರಾಂಶುಪಾಲರು ಆಯಾ ವಸತಿ ಶಾಲೆಗಳಲ್ಲಿನ ಯಾವುದೇ ಖಾಯಂ ಶಿಕ್ಷಕರು ರಾಜೀನಾಮೆ ನೀಡಿದ್ದಲ್ಲಿ, ಕರ್ತವ್ಯದಿಂದ ಬಿಡುಗಡೆಗೊಂಡು ಇತರೆ ಇಲಾಖೆಗೆ ತೆರಳಿದ್ದಲ್ಲಿ, ನೇಮಕಾತಿ ಆದೇಶ ರದ್ದುಪಡಿಸಿ ಕರ್ತವ್ಯದಿಂದ ಬಿಡುಗಡೆ ಮಾಡಿದ್ದಲ್ಲಿ ಅಥವಾ ಮರಣ ಹೊಂದಿದ್ದಲ್ಲಿ ಕಡ್ಡಾಯವಾಗಿ ಮಾಹಿತಿಯನ್ನು ಸಲ್ಲಿಸುವುದು. ನಿಗಧಿತ ದಿನಾಂಕದ ನಂತರ ಸ್ವೀಕೃತಗೊಳ್ಳುವ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕಾರ್ಯನಿರ್ವಾಹಕ ನಿರ್ದೇಶಕರು

ಪ್ರತಿಯನ್ನು ಮಾಹಿತಿಗಾಗಿ ಕಳುಹಿಸಿದೆ.

1. ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
2. ಎಲ್ಲಾ ವಸತಿ ಶಾಲೆಗಳ ಪ್ರಾಂಶುಪಾಲರಿಗೆ
3. ವಸತಿ ಶಾಲೆಗಳ ಪ್ರಾಂಶುಪಾಲರ ಮುಖಾಂತರ ವಸತಿ ಶಾಲೆಗಳ ಶಿಕ್ಷಕರುಗಳಿಗೆ
4. ಕಛೇರಿ ಪ್ರತಿ.